**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 446/2014**

| | | | |
|---|---|---|---|
| **ಹೆಸರು** | **:** | **ಖಲಿಂ ಪಾಶಾ** | **ದೋ.ಸಾ.11** |
| **ತಂದೆಯ ಹೆಸರು** | **:** | **ಮಸ್ತಾನ ಸಾಬ್** | **ಪ್ರಾ.ಸಾ. 6** |
| **ವಯಸ್ಸು** | **:** | **46 ವರ್ಷ** | **ದಿನಾಂಕಃ 22-12-2023** |
| **ಉದ್ಯೋಗ** | **:** | **ಕೂಲಿ ಕೆಲಸ** | |
| **ವಾಸಸ್ಥಳ** | **:** | **ಚಂದನಕೇರಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನನಗೆ 1 ನೇ ಆರೋಪಿ ಗೊತ್ತು. 2 ನೇ ಆರೋಪಿ ಗೊತ್ತಿಲ್ಲ. ನನಗೆ ಚಾಸಾ-1 ರಿಂದ ಚಾಸಾ-7 ರವರೆಗೆ ನನಗೆ ಗೊತ್ತು. ಚಾಸಾ-10, 12 ರವರು ನನಗೆ ಗೊತ್ತು. ನನಗೆ ಈ ಪ್ರಕರಣದ ಬಗ್ಗೆ ಯಾವದೇ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಮತ್ತು ಪಂಚನಾಮೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-**

ದಿನಾಂಕಃ 27-11-2012 ರಂದು ಬೆಳಿಗ್ಗೆ 11.00 ಗಂಟೆಗೆ ಮೋಹರಂ ಹಬ್ಬದ ಜಾರತ ಮಾಡುವ ಕುರಿತು ನಾನು ನಮ್ಮೂರ ಮಕ್ಬೂಲ ದಫೆದಾರ ಹಾಗೂ ಮಶಾಕ ದಫೆದಾರ ಕರೀಮಸಾಬ, ಮಸ್ತಾನ ಅಲಿ ಶಾಬಶಾ ಕೋಪಿವಾದ ಹಾಕಿ ಪೂಜೆ ಮಾಡುತ್ತಿರುವಾಗ ಸ ನಮ್ಮೂರ ಹಮೀದ ತಂದೆ ಮಸ್ತಾನ ಸಾಬ ಬುಗುಟಗೇರ ಈತನು ಮಕ್ಬುಲ ಇತನಿಗೆ ರಂಡಿ ಮಗನೆ ಮಕ್ಬುಲ್ಯಾ ನನ್ನದು ಉದಾನಿ ತೆಗೆದುಕೊಂಡು ಬಂದಿದ್ದಿ ಯಾಕೆ ಅಂದಾಗ ಮಕ್ಬುಲ ಇವನು ದೇವರ ಎದುರುಗಡೆ ಇದ್ದಿದರಿಂದ ತೆಗೆದುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ನಿನ್ನದು ಇದ್ದರೆ ನೀನು ತೆಗೆದುಕೊಂಡು ಹೋಗು ಅನ್ನುತಿದ್ದಂತೆ ಹಮೀದನು ನನ್ನ ಉದಾನಿ ತಗೋ ನನಗೆ ಎದುರು ಮಾತನಾಡುತ್ತಿ ಅಂತಾ ಮಕ್ಬುಲ ಇವನು ನಾನೇನು ಎದುರು ನಾತನಾಡಿದ್ದೆ ಅಂತಾ ಈ ರೀತಿ ಬೈಯುತ್ತಿದ್ದೀರಿ ಅಂದಾಗ ಹಮೀದನ ಅಣ್ಣನಾದ ಫತ್ರುಸಾಬ ಇತನು ಬಂದವನೆ ಎ ಸೂಳೆ ಮಗನೆ ನಮ್ಮ ತಮ್ಮನ ಉದಾನಿ ತೆಗೆದುಕೊಂಡು ನಮಗೆ ಜಗಳ ಮಾಡುತ್ತಿ ಅಂತ ಹೊಡೆಯಲು ಬಂದಾಗ ಅಲ್ಲೆ ಇದ್ದ ನಾವೆಲ್ಲರೂ ಸಮಜಾಯಿಸಿ ಬಿಡಿಸಿ ಕಳುಹಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ.

ಹೀಗಿದ್ದು ನಿನ್ನನ ದಿನಾಂಕಃ 27-11-2012 ರಂದು ಸಾಯಂಕಾಲ 5 ಗಂಟೆ ಸುಮಾರಿಗೆ ನಾನು ನಮ್ಮ ಗ್ರಾಮದ ಅಗಸಿ ಹತ್ತಿರ ಇದ್ದಾಗ ಗ್ರಾಮ ಪಂಚಾಯತಿ ಭವನದ ಕಡೆ ಬಾಯಿ ಮಾಡಿ ಚಿರಾಡುವುದನ್ನು ಕೇಳಿ ನಾನು ಅಲ್ಲಿ ಹೋಗಿ ನೋಡಲಾಗಿ ಅಲ್ಲಿ ನಮ್ಮ ಗ್ರಾಮದ ಮಕ್ಬುಲ ದಫೇದಾರ ಇತನ ಮಗನಾದ ಶಫಿ ಇವನಿಗೆ ನಮ್ಮ ಗ್ರಾಮದ ಹಮೀದ, ಹಮೀದನ ಮಗನು ಹಮೀದನ ಅಣ್ಣನಾದ ಫತ್ರುಸಾಬ ಇದ್ದು 5 ಜನರು ಕೂಡಿ ಶಫಿ ಇವನಿಗೆ ಕೆಳಗೆ ಹಾಕಿ ಕೈಯಿಂದ ಹೊಡೆಯುತ್ತಿರುವಾಗ ಒಬ್ಬನು ಕಲ್ಲಿಂದ ಮಕ್ಬುಲ ಇತನಿಗೆ ಫತ್ರುಸಾಬ ಇತನು ಕಾಲಿನಿಂದ ಹೊಟ್ಟೆಗೆ ಒದೆಯುತಿದ್ದ ಉಳಿದವರು ಕೈಯಿಂದ ಶಫಿಗೆ ಹೊಟ್ಟೆಗೆ ಬನ್ನಿಗೆ ಹೊಡೆಯುತ್ತಿರುವಾಗ ಒಬ್ಬನು ಕಲ್ಲಿನಿಂದ ಮಕ್ಬುಲನಿಗೆ ಎದೆಗೆ ಹೊಡೆಯುತಿರುವಾಗ ಆಗ ಹಮೀದನ ಮಗ ನಜೀಮ ಇತನು ಏ ಮಹ್ಮದ ಜಹೀರ ಗಾಡಿಯ ಜಾಕು ಲೆಕೆ ಆರೆ ಅಂದಾಗ ಜಹೀರ ಎಂಬುವನು ಜಾಕು ತೆಗೆದುಕೊಂಡು ಮಕ್ಬುಲ ಇತನಿಗೆ ಹೊಡೆಯಲು ಬರುತ್ತಿರುವಾಗ ಅದೇ ವೇಳೆಗೆ ಜಗಳದ ಸದ್ದು ಕೇಳಿ ಬಂದಾಗ ನಮ್ಮೂರ ಬಸೀರ ತಂದೆ ಮಸ್ತಾನಸಾಬ ಶಾಶಾ ಇಮಾಸಾಬ, ರಾಜು, ಬಸವರಾಜ ತಂದೆ ಗುರುಶಾಂತಪ್ಪ ಕಡಗದ, ನಾವೆಲ್ಲರೂ ಕೂಡಿ ಜಗಳ ಬಿಡಿಸುತ್ತಿದಾಗ ನಜೀಮ ಇತನು ಈ ರಂಡಿ ಮಕ್ಕಳಿಗೆ ಹೊಡೆದು ಖಲಾಸ ಮಾಡಬೇಕೆಂದು ಗುಲಬರ್ಗಾದಿಂದ ನನ್ನ ಗೆಳೆಯರಿಗೆ ಕರೆಸಿದ್ದಾನೆ ಎಂದರೆ ಸರಿಯಲ್ಲ. ಹಾಗೆ ಬಿಟ್ಟಟೆ ಹ್ಯಾಗೆ ಅಂತಾ ಬೈಯುತ್ತಿರುವಾಗ ನಾವೆಲ್ಲರೂ ಸಮಜಾಯಿಸಿ ಜಗಳ ಬಿಡಿಸಿ ಕಳುಹಿಸುತ್ತಿರುವಾಗ ಫತ್ರುಸಾಬ, ಹಮೀದ, ನಜೀಮ, ಇವರು ಮಕ್ಬುಲ ಹಾಗೂ ಮಕ್ಬುಲನ ಮಗನಿಗೆ ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ನಿಮ್ಮ ಜೀವ ಸಹಿತ ಬಿಡುವುದಿಲ್ಲ ಅಂತ ಬೆದರಿಕೆ ಹಾಕುತ್ತ ಹೋದರು ಎಂದರೆ ಸರಿಯಲ್ಲ. ನಜೀಮ ಇತನು ತನ್ನ ಗೆಳೆಯರಿಗೆ ಕರೆದುಕೊಂಡು ಬಂದ ವಾಹನ ನೋಡಲಾಗಿ ಕೆಂಪು ಬಣ್ಣದ್ದು ಆಗಿದ್ದು ಅದರ ನಂಬರ ಕೆಎ-19 -3423 ಇದ್ದು ಸದರಿಯವರು ವಾಹನ ಅಲ್ಲೆ ನಿಲ್ಲಿಸಿ ಹಮೀದನ ಮನೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಮಗೆ ಗೊತಾಗಿದ್ದೆನೆಂದರೆ ನಜೀಮ ಇತನು ಗುಲಬರ್ಗಾದಿಂದ ಕರೆದುಕೊಂಡ ಬಂದ ಗೆಳೆಯರ ಹೆಸರು ಮಹ್ಮದ ಮೋಹಿನ್, ಮಹ್ಮದ, ಮೊಬಿನ ಅಹ್ಮದ, ಅನೀಸ್ ಅಲಿ ಅಂತಾ ಗೊತ್ತಾಗಿದ್ದು ಮಕ್ಬುಲ ಇತನ ಎದಗೆ ಕಲ್ಲಿನಿಂದ ಹೊಡೆದವನ ಹೆಸರು ಮಹ್ಮದ ಮೋಹಿನ ಅಂತಾ ಗೊತ್ತಾಗಿದ್ದು ಇರುತ್ತದೆ ಎಂದರೆ ಸರಿಯಲ್ಲ. ಅಲ್ಲಗಳೆದ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**